ಸುಲಭಗೊಳಿಸಲು ಯಂತ್ರಗಳಿರುವುದೇ ಹೊರತು, ಅವನ ವಿವೇಚನೆಗೆ ಬದಲಿಯಾಗಿ ಯಂತ್ರಗಳು ಕಾರ್ಯ ನಿರ್ವಹಿಸುವುದಕ್ಕಂತೂ ಅಲ್ಲ. ಪರ್ಯಾಯ ವ್ಯವಸ್ಥೆ ಸಹ ಮಾಡದೆ ಒಂದೊಂದು ದಿಕ್ಕಿನಿಂದ ಬಂದ ಮೆಟ್ರೋಗಳಿಗೆ ನೋಡಲ್ ನಿಲ್ದಾಣದಲ್ಲಿ ಸರಿಯಾದ ಸುರಂಗ ವ್ಯವಸ್ಥೆಯಾಗದೆ ಒಂದಕ್ಕೊಂದು ಡಿಕ್ಕಿ ಹೊಡೆದ ಪರಿಣಾಮವಾಗಿ ಅಲ್ಲಿನ ನಿರ್ಮಾಣವೇ ಕುಸಿದು ಬಿದ್ದಿತ್ತು!

ಈಗ ನಿರ್ದೇಶನ ನೀಡಿದರೆ ಏನಾಗಬಹುದು? ಅಂಡರ್‌ಗ್ರೌಂಡ್ ಬುಲೆಟ್ ಮೆಟ್ರೋ ಸಂಚಾರ ಹೆಚ್ಚುವರಿ ಕಮೀಷನರ್ ಶಮಿತವ್ ಕೇಳಿದಾಗ ಮುಖ್ಯ ಎಂಜಿನಿಯರ್ ಬಾಯಿಂದ ಹೊರಟ ಮಾತೊಂದೇ – 'ಕಾದು ನೋಡಬೇಕಿದೆ.'

ಕೂಡಲೇ ಪ್ರಮುಖ ಪರೀಕ್ಷಾ ಘಟ್ಟವನ್ನು ತಲುಪಿದ್ದೇವೆಂದು 'ಎಂಪಿ ವಾಕ್'ಯಲ್ಲಿ ಎಚ್ಚರಿಕೆಯ ಕರೆ ಹೋಗಿತ್ತು. ಸುರಕ್ಷತಾ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದ ಎಲ್ಲಾ ತಂಡಗಳೂ ತಮ್ಮ ಕೆಲಸಗಳನ್ನು ಸ್ಥಗಿತಗೊಳಿಸಿ ದೂರ ಸರಿದು ಅಲ್ಲಿನ ಆಗುಹೋಗುಗಳನ್ನು ತಾವಿದ್ದಲ್ಲಿಂದಲೇ ವೀಕ್ಷಿಸತೊಡಗಿದ್ದರು.

ನೆಟ್‌ವರ್ಕ್ ಕೇಂದ್ರದಲ್ಲಿ ನೀಡಲಾದ ಕೆಲವು ನಿರ್ದೇಶನಗಳ ಬಳಿಕ ಕುಸಿದ ನಿರ್ಮಾಣದ ಜೋಡಣೆಗಳು ದುರಸ್ತಿ ಸ್ಥಿತಿಯಲ್ಲೇ ಮೇಲೆದ್ದು ಹಲವು 'ಜರ್ಕ್'ಗಳ ಬಳಿಕ ಹೊಂದಿಕೊಳ್ಳಲು ಪ್ರಯತ್ನಿಸಿದ್ದವು. ಆದರೆ ಮುರಿದ ಬಿಡಿಭಾಗಗಳಿಗೆ ಬದಲಿ ವ್ಯವಸ್ಥೆಯಾಗದ ಹೊರತು 'ತೃಪ್ತಿಕರ' ಪ್ರಮಾಣ ಪತ್ರ ನೀಡಲಿಕ್ಕೂ ಬರದು. ಕಡೆಗೆ ಆದಷ್ಟೂ ತಮ್ಮ ಕೆಲಸ ಸುಲಭವಾಯಿತೆಂಬ ಸಮಾಧಾನ ಎಲ್ಲರಿಗೂ ಇತ್ತು.

ಎರಡು ರಾತ್ರಿಗಳ ಅವಿಶ್ರಾಂತ ಕೆಲಸದ ಮಧ್ಯೆ ಹನ್ನಾಳಿಗೆ ಸಂದರ್ಭ ಬಂದಾಗ ಕೆಳಹಂತ ತಲುಪಿ ನೆಲದ ಮಣ್ಣನ್ನು ಸ್ಪರ್ಶಿಸಿದಳು. ಎಲ್ಲೆಡೆ ಕಣ್ಣು ಹಾಯಿಸಿದಷ್ಟೂ ದೂರ ಕೃತಕ ನಿರ್ಮಾಣಗಳೇ ಎದ್ದು ಕಾಣುತ್ತಿದ್ದವು. ಈ ಭೂಮಿಯ ಸ್ಪರ್ಶವನ್ನೇ ಮಾನವ ಮರೆತಿದ್ದನೇನೋ ಎನಿಸಿತ್ತು. ಮಣ್ಣಿನ ಪ್ರಥಮ ಸ್ಪರ್ಶಕ್ಕೆ ಪುಳಕಿತಗೊಂಡ ಈ ತ್ರಿಲೋಕ ಸಂಚಾರಿ ನೀರೆ ಕೆಲಸ ಮುಗಿಸಿ ಹೊರಡುವ ವೇಳೆ ಅಮೂಲ್ಯ ವಸ್ತುವನ್ನು ಕೊಂಡೊಯ್ಯುವಂತೆ ಒಂದು ಪೆಟ್ಟಿಗೆಯಲ್ಲಿ ಆ ನೆಲದ ಮಣ್ಣನ್ನು ಸ್ಮರಣಿಕೆಯ ರೂಪದಲ್ಲಿ ತುಂಬಿಸಿಕೊಳ್ಳಲು ಮಾತ್ರ ಮರೆಯಲಿಲ್ಲ!

ತನ್ನ ವಾಸಸ್ಥಳ ತಲುಪುತ್ತಿದ್ದಂತೆಯೇ ಕಳೆದ ಮೂರು ದಿನಗಳ ಅವಿಶ್ರಾಂತ ಪರಿಶ್ರಮಕ್ಕೆ ನಿದ್ದೆ ಎಳೆದುಕೊಂಡು ಬಂದಿತ್ತು. ಪ್ರಕೃತಿಯ ಮಡಿಲಲ್ಲಿ ಹಸುಗೂಸಾಗಿ ಮಲಗುವ ಇಚ್ಛೆಯಾಗಿ, ತನ್ನ ಮನೆಯ ಉಪಕರಣಗಳಿಗೆ ಸಂಪರ್ಕ ಹೊಂದಿದ ರಿಮೋಟ್ ಬಟನ್ ಒತ್ತಿದೊಡನೆ ಅವಳ ಮುಂದೆ ವಿವಿಧ ಆಯ್ಕೆಗಳ ಬಿಂಬಗಳು ಪ್ರತ್ಯಕ್ಷವಾಗಿದ್ದವು. ಅದರಲ್ಲಿ ಹಸಿರು ವನಸಿರಿಯನ್ನು ಆಯ್ಕೆ ಮಾಡುತ್ತಿದ್ದಂತೆಯೇ, ಬೆಡ್ ರೂಮ್‌ನ ಗೋಡೆಗಳ ಚಿತ್ರಗಳಲ್ಲಿ ಬದಲಾವಣೆಯಾಗಿ ದಟ್ಟ ಕಾಡಿನ ಪ್ರತಿಬಿಂಬ, ಸೂರಿನಲ್ಲಿ ಆಕಾಶದ ತುಣುಕುಗಳು ಕಾಣಿಸುವಂತೆ ವಾತಾವರಣ ನಿರ್ಮಾಣವಾಯಿತು. ಹನ್ನಾ ಹಾಸಿಗೆಯ ಮೇಲಿನ ದಿಂಬಿಗೆ ತಲೆಕೊಟ್ಟು ನಿದ್ರೆಗೆ ಜಾರಿದಳು. ನಿದ್ರೆಯಲ್ಲೂ ಕೆಲಕಾಲ ಕಾಡಿದ ದುರ್ಘಟನೆಗಳು ಪದರಪದರಗಳಾಗಿ ಮೆಲುಕು ಹಾಕುವಂತಾಗಿ, ನಂತರ ದೀರ್ಘ ನಿದ್ರೆಗೆ ಜಾರಿದಳು. ಅವಳ ಇಂದ್ರಿಯಗಳು ವಿಶ್ರಾಂತಿಯನ್ನು ಬೇಡಿ ಸುತ್ತಲಿನ ದೃಶ್ಯಗಳು ಮಾಸಿ ಕತ್ತಲಾವರಿಸಿತು.

* * *

ಬೆಳಗಿನ ಜಾವ ಗೋಡೆಗಳ ನಡುವಿನ ಕೃತಕ ವಾತಾವರಣದ ನಡುವಿನಿಂದ ಸೂರ್ಯ ಟೈಮರ್‌ಗೆ ಅಳವಡಿಸಿದಂತೆ ಮೇಲೆದ್ದು, ಅವಳ ಮುಖದ ಮೇಲೆ ಪ್ರಥಮ ಬೆಳಕನ್ನು ಚೆಲ್ಲಿದಾಗ ಎಚ್ಚರವಾಯಿತು. ಹಾಸಿಗೆಯ ಮೇಲೆ ಮಿಸುಕಾಡಿ ಏಳಲೋ ಬೇಡವೋ ಎಂಬಂತೆ ಹೊರಳಾಡಿ ಎದ್ದು ಮೈಮುರಿದು ಮುಖಮಾರ್ಜನ ಮುಗಿಸಿ ಉಪಾಹಾರಕ್ಕೆ ಕೂತಾಗ ಅವಳಿಗೆ ತನ್ನ ಮ್ಯಾಮ್ ಅಲಕಾದೇವಿಯ ನೆನಪಾಗಿತ್ತು. ಅವರು ಈಗಾಗಲೇ ಬಂದು ತನ್ನನ್ನು ಉಪಚರಿಸಬೇಕಿತ್ತು. 'ಯಾಕೆ ಬರಲಿಲ್ಲವೋ' ಎಂದು ಎದುರು ನೋಡುವಾಗಲೇ ಅವರು ಕೋಣೆಯಿಂದ ಹೊರಬಂದವರೇ ಅವಳ ಎದುರಿಗಿನ ಕುರ್ಚಿಯಲ್ಲಿ ಆಸೀನರಾಗಿ ನಸುನಗು ಬೀರಿದ್ದರು.

'ರಾತ್ರಿ ಚೆನ್ನಾಗಿ ನಿದ್ರೆ ಬಂತೇ ಮಗಳೇ? ಈ ಮೂರು ದಿನಗಳು ನೀನೆಲ್ಲಿ ಕಾಣೆಯಾದೆಯೋ ಅಂತ ಮಿಸ್ಸಿಂಗ್ ಕಂಪ್ಲೇಂಟ್ ಅನ್ನು ಆನ್‌ಲೈನ್‌ನಲ್ಲಿ ನೀಡಬೇಕೆಂದಿದ್ದೆ. ಅಷ್ಟರಲ್ಲಿ ನೀನು ಬಿಜಿಯಾಗಿದ್ದೀ ಎಂದು ಶಮ್ಮಿ ನನ್ನ 'ಸಂವೇದಿ'ಗೆ ಸಂದೇಶ ರವಾನಿಸಿದಳು. ನೀನು ಬರುವವರೆಗೂ ನಾನು ಮನೆಯನ್ನು ಸ್ವಚ್ಛಗೊಳಿಸಿ ಹೊಸ ರೂಪ ತರಲು ಪ್ರಯತ್ನಿಸಿದೆ.'

'ಅಂತೂ ಮಾಮ್, ನೀನು ಅವಿಶ್ರಾಂತವಾಗಿ ಏನಾದರೊಂದು ಕೆಲಸದಲ್ಲಿ ತೊಡಗಿಸಿಕೊಂಡು ನನಗೆ ಮುದ ನೀಡುವುದನ್ನು ನೋಡಿದರೆ ನಿನ್ನನ್ನು ಸೃಷ್ಟಿಸಿದ ಆ ಸೃಷ್ಟಿಕರ್ತನಿಗೆ ನೂರು ನಮನಗಳನ್ನು ಸಲ್ಲಿಸಬೇಕೆನಿಸಿದೆ.'

ಹನ್ನಾಳ ಮಾತಿಗೆ ಅಲಕಾದೇವಿಯ ಮುಖ ರಂಗೇರಿ, 'ಮಗಳೇ, ಹೊಗಳಿಕೆಯ ಮಾತು ಸಾಕು. ನೀನು ಆ ಮೂರು ದಿನಗಳು ಪಟ್ಟ ಶ್ರಮ ನನ್ನ 'ಸಂವೇದಿ' ಚಿಪ್‌ಗೆ ರವಾನೆಯಾಗುತ್ತಿತ್ತು. ಹೋಗಲಿ. ನೀನು ಕೊಂಚ ಮಸಾಜರ್‌ನಲ್ಲಿ ಕೂತು ವಿರಮಿಸು. ಕಚೇರಿಗೆ ಹೋಗಲು ಇನ್ನರ್ಧ ಗಂಟೆ ಬಾಕಿ ಇದೆ' ಎಂದು ಸಲಹೆ ನೀಡಿದರು.

'ಮಾಮ್, ಅದಕ್ಕೆ ಅರ್ಧ ಗಂಟೆ ಸಾಕಾಗುವುದಿಲ್ಲ. ಸಂಜೆ ಬೇಗ ಮನೆಗೆ ಬರಲಿಕ್ಕೆ ಪ್ರಯತ್ನಿಸುತ್ತೀನಿ. ಆನಂತರ ನೋಡುವ. ಬಾಯ್' ಎಂದು ತನ್ನ ಕಾರನ್ನು ಸಾಮೂಹಿಕ ಗ್ಯಾರೇಜ್‌ನಿಂದ ರಿಮೋಟ್ ಬಳಸಿ ಬರಮಾಡಿಕೊಂಡು ಕಚೇರಿಗೆ ದೌಡಾಯಿಸಿದಳು.

ಕಚೇರಿಗೆ ಅವಳು ಎಂದಿನಂತೆ ಕಾಲಿಟ್ಟೊಡನೆಯೇ ಅವಳಿಗೆ ತನ್ನ ಸಹೋದ್ಯೋಗಿಗಳಿಂದ ಅಭೂತಪೂರ್ವ ಸ್ವಾಗತ ಕಾದಿತ್ತು. ತನ್ನ ಕೊಠಡಿಯಲ್ಲಿ ಎಲ್ಲಿಂದಲೋ ದಿಢೀರ್ ಪ್ರತ್ಯಕ್ಷವಾದಂತೆ ದೀಪಗಳು ಹೊತ್ತಿಕೊಂಡು ಆಕಾಶದಿಂದ ಹೂ ಚೆಲ್ಲಿದಂತೆ ದೀಪದ ಹೂಗಳು ಬಿಂಬಗಳಾಗಿ ಅವಳ ಮೇಲೆ ಧಾರೆಯೆರೆದಿದ್ದವು. ಅವುಗಳು ದೀಪಗಳಲ್ಲದ ದೀಪಗಳಾಗಿದ್ದವು. ಸ್ಪರ್ಶ ಸಂವೇದನೆಯ ಅನುಭವಕ್ಕೆ ವೇದ್ಯವಾಗದೆ ಹಾರೈಕೆಯ ಮಳೆಯಾಗಿದ್ದವು.

'ಮೋನಾ... ಶಿಖಾ... ಜಾನ್... ಥ್ಯಾಂಕ್ ಯೂ ಆಲ್...' ಎಂದು ಕೈಯಲ್ಲೇ ಎಲ್ಲಾ ಸರಿಸುವಂತೆ ಆಡಿಸಿದಾಗ ಒಂದೊಂದಾಗಿ ದೀಪಗಳು ಮಾಯವಾಗಿದ್ದವು.

ಇಡೀ ನಗರವೇ ಸ್ತಬ್ಧವಾದಂತಹ ಸನ್ನಿವೇಶ ನಿರ್ಮಾಣವಾಗಿದ್ದರ ಬಗ್ಗೆ ಎಲ್ಲರೂ ತಿಳಿದುಕೊಂಡವರೇ. ಆದ್ದರಿಂದ ಅವಳ ಶ್ರಮವನ್ನು ಶ್ಲಾಘಿಸಲು ಮರೆತಿರಲಿಲ್ಲ. ಸಾಮಾಜಿಕ ಜಾಲತಾಣದಲ್ಲಿ ತುರ್ತು ಪರಿಸ್ಥಿತಿಯಲ್ಲಿ ಸ್ಪಂದಿಸಿದ ಆಪದ್ಬಾಂಧವರ ಬಗ್ಗೆ ಇಣುಕು ನೋಟ ನೀಡಿದಾಗ ಅದರಲ್ಲಿ ಹನ್ನಾಳ ಸೇವೆಯನ್ನು ಪ್ರಸ್ತಾಪಿಸಲಾಗಿತ್ತು. ಹಿಂದಿಗಿಂತ ಅಧಿಕ ಹುಮ್ಮಸ್ಸು ಮೈದುಂಬಿದಂತೆನಿಸಿ ತನ್ನ ಕಚೇರಿ ಕೆಲಸದಲ್ಲಿ ತೊಡಗಿಕೊಳ್ಳುತ್ತಿರುವಾಗಲೇ ಅವಳ ಎಂ.ಪಿ ವಾಕಿಗೆ ಅಂದಿನ ಸಂಚಾರ ಡ್ಯೂಟಿ ಚಾರ್ಟ್‌ನಲ್ಲಿ ರೊಟೇಷನ್ ಮೇಲೆ ಬೆಂಗಳೂರಿನ ಸಿಟಿ ಸೆಂಟ್ರಲ್‌ನಲ್ಲಿ ಕರ್ತವ್ಯಕ್ಕೆ ಹಂಚಿಕೆ ಮಾಡಿರುವುದು ಪ್ರಸಾರವಾಗಿತ್ತು. ಕಠಿಣ ಶ್ರಮದ ನಂತರ ಕೊಂಚ ಲಘು ಕರ್ತವ್ಯ ನೀಡುವ ಸಲುವಾಗಿ ಈ ರೀತಿ ಮಾರ್ಪಾಡು ಮಾಡಿದ್ದರೆಂದು ಅವಳ ಸಹ ಟ್ರಾಫಿಕ್ ವಾರ್ಡನ್ ಅನಘಾ ಅನಂತರ ಎಂ.ಪಿ ವಾಕಿಗೆ ಸಂದೇಶ ಕಳುಹಿಸಿದ್ದಳು.

ಸಂಜೆ ತನ್ನ ಪಾಳಿಯ ಕೆಲಸ ಮುಗಿಸಿ ಸಿ.ಇ.ಓ. ಪ್ರಫುಲ್ಲಾರಾವ್‌ಗೆ ತಿಳಿಸಿ, ಏಕಮುಖ ಸಂಚಾರ ಮಾರ್ಗದಲ್ಲಿ ಸಿಟಿ ಸೆಂಟ್ರಲ್ ಕಡೆ ಹೊರಟಾಗ ಅವಳ ಕಾರಿನ ಮುಂದಿನ ಗಾಜು ರಸ್ತೆ ಮಾರ್ಗಗಳನ್ನು ಪರದೆಯಂತೆ ಬಿಂಬಿಸುತ್ತಾ ಮುಂಬರುವ ಸ್ಥಳಗಳನ್ನು ಸೂಚಿಸುತ್ತಿತ್ತು. ಲೊಕೇಷನ್ ಸಂಚಾರಿ ಸೆನ್ಸಾರ್ ನಿರ್ದಿಷ್ಟ ಸ್ಥಳಕ್ಕೆ ವಾಹನ ಸಾಗಲು ಅನುವು ಮಾಡಿಕೊಡುವಾಗಲೇ ರಸ್ತೆಯ ಒಂದೆಡೆ ಘರ್ಷಣೆಗೆ ಒಳಪಟ್ಟ ವಾಹನ ಸವಾರ ರಕ್ತದ ಮಡುವಿನಲ್ಲಿ ಬಿದ್ದು ಹೊರಳಾಡುವುದು ಕಾಣಿಸಿತು. ಇದಂತೂ ಹನ್ನಾಳ ವ್ಯಾಪ್ತಿಯ ಪ್ರದೇಶವಾಗಿರದಿದ್ದರೂ ಕಣ್ಣೆದುರಿಗೆ ಕಂಡ ದೃಶ್ಯ ಕರುಳು ಹಿಂಡುವಂತಿದ್ದು ಸಹಾಯಕ್ಕೆ ಧಾವಿಸಿದ್ದಳು.

ತನ್ನ ಬಳಿ ಯಾವಾಗಲೂ ತುರ್ತು ಸಂದರ್ಭಕ್ಕೆ ಅನುವಾಗಲೆಂದು ಇಟ್ಟುಕೊಂಡಿದ್ದ ಪ್ರಥಮ ಚಿಕಿತ್ಸೆ ಬಾಕ್ಸ್ ಅನ್ನು ಹೊರತೆಗೆದು ಗಾಯಾಳುವಿನ ದೇಹದಿಂದ ರಕ್ತ ಹರಿಯದಂತೆ ತಡೆಗಟ್ಟಲು ಕ್ರಮ ಕೈಗೊಂಡು ಸಮೀಪದ 'ತುರ್ತು ನಿರ್ವಹಣಾ ಕೇಂದ್ರಕ್ಕೆ' ಗಾಯಾಳುವನ್ನು ಏರ್ ಆಂಬ್ಯುಲೆನ್ಸ್ ಮೂಲಕ ಸಾಗಿಸಿದ್ದಳು.

ಅಪಘಾತವಾದೊಡನೆಯೇ ಚಾಲಕನ ವಾಹನಕ್ಕೆ ಅಳವಡಿಸಲಾದ ಟ್ರಾಮಾ ಸೆನ್ಸಾರ್‌ನಿಂದ ವ್ಯಾಪ್ತಿಯ ಸಂಚಾರ ಎಂಜಿನಿಯರ್‌ಗೆ ಕರೆ ಹೋಗಿ ಕೆಲವೇ ನಿಮಿಷಗಳಲ್ಲಿ ಒಂದು ತಂಡವೇ ಅಲ್ಲಿಗೆ ಧಾವಿಸಿತ್ತು. ಅಪಘಾತ ಸ್ಥಳದಲ್ಲಿದ್ದ